ವಿ. ಹಮೀದ್, ವಿಟ್ಲ
ಪುಣ್ಯಕ್ಕಿಂತ ಪಾಪಗಳೇ ಹೆಚ್ಚುತ್ತಿರುವುದನ್ನು ಭೂಮಿ ಹೇಗೆ ಅರಗಿಸಿಕೊಳ್ಳುತ್ತದೆ?



ಶತಮಾನಕ್ಕೆ ಎರಡೋ ಮೂರೋ ಬಾರಿ ಕೊರೊನಾದ ಅಕ್ಕತಂಗಿಯರನ್ನು ಕಳುಹಿಸಿ...

ಖಾದಿ ಪ್ರಮೀಳ, ಮೇಲುಕೋಟೆ
ಅಶ್ವತ್ಥಾಮ, ಬಲಿ, ವ್ಯಾಸರಾದಿಯಾಗಿ ಚಿರಂಜೀವಿಗಳೆಲ್ಲಾ ಪುರುಷರೇ ಏಕೆ?
ಪುರುಷರ ಅಶ್ವ(ರೇಸ್), 'ತಮೋ'ಗುಣಗಳ ವ್ಯಾಸಕ್ಕೆ ಸ್ತ್ರೀಯರು ಬಲಿ ಆಗಿಬಿಟ್ಟಿದ್ದರಿಂದ.

ಎಂ.ಎನ್. ಗೋಪಾಲರಾವ್, ಊರಿಲ್ಲ
ನನ್ನ ದವಡೆಯ ಎಲ್ಲಾ ಹಲ್ಲುಗಳನ್ನು ಒಮ್ಮೆಲೇ ಉದುರಿಸಿದವರಿಗೆ ಶಿಕ್ಷೆ ಕೊಡುವವರು ಯಾರು?
ಟೂ ಲೇಟ್! ಆ ಕರಾಟೆ ಹುಡುಗಿಯನ್ನು ಕೆಣಕಬೇಡಿ ಎಂದು ಅಂದೇ ಹೇಳಿದ್ದೆ...

ನಾಜ್ಯೋತಿ, ಹೂವಿನಹಡಗಲಿ
ಕಾನೂನನ್ನು ವಕೀಲರಿಗೊಪ್ಪಿಸಿ ಅಂಧಳಂತಿರುವ ಬದಲು ನ್ಯಾಯದೇವತೆಯೇ ನ್ಯಾಯ ಪರಾಮರ್ಶಿಸುವುದಿಲ್ಲವೇಕೆ?



ನ್ಯಾಯದೇವಿ ಕಣ್ಣೀರಿಗೆ ಕರಗುವ ಮಾತೃಹೃದಯಿ. ನ್ಯಾಯಕ್ಕೆ ಕಠಿಣಹೃದಯವೇ ಬೇಕಾದ್ದರಿಂದ...

ಪಿ.ಜೆ. ರಾಘವೇಂದ್ರ, ಮೈಸೂರು
ಪತ್ನಿಯನ್ನು ಡಾರ್ಲಿಂಗ್ ಎನ್ನಬೇಕೆಂದ ಕೋರ್ಟ್ ಪತಿಯನ್ನು ಏನೆನ್ನಬೇಕೆಂದು ಹೇಳಲಿಲ್ಲವೇಕೆ?
ಏನೇನು ಬೇಕಾದರೂ ಅನ್ನಬಹುದೆಂದು ಪ್ರಪಂಚಕ್ಕೇ ತಿಳಿದಿರುವುದರಿಂದ.

ಆರ್. ಮಧುಸೂದನ್, ಹಾಸನ
'ನಮ್ಮಲ್ಲೇ ಮೊದಲು' ಎಂಬ ಶೀರ್ಷಿಕೆ ಹಾಕಿ ಸುದ್ದಿ ಪ್ರಚಾರ ಮಾಡುವುದೇಕೆ?
ಗುಜರಿ ಅಂಗಡಿಯ ಮುಂದಿನ 'ತಾಜಾ ಮಾಲು ದೊರೆಯುತ್ತದೆ' ಫಲಕದಿಂದ ಪ್ರೇರಿತರಂತೆ.

ಹರಿತಸ, ಬೆಂಗಳೂರು
ಅರೇಂಜ್ಡ್ ಮ್ಯಾರೇಜ್ ಮತ್ತು ಲವ್ ಮ್ಯಾರೇಜ್‌ಗಳಲ್ಲಿ ಯಾವುದು ಹೆಚ್ಚು ಸಂತೋಷ ನೀಡುತ್ತದೆ?
ಲವ್ ಮ್ಯಾರೇಜೇ ಮದುವೆಗೆ ಮುನ್ನ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮದುವೆಗಳಲ್ಲೂ ಪ್ರಾಯೋಗಿಕತೆ ಪ್ರಾರಂಭವಾದರೆ ಹೇಗೆ?
ಎಲ್ಲ ಮದುವೆಗಳದೂ ಪ್ರಾಯೋಗಿಕತೆಯೇ; ಪ್ರಾಯದಲ್ಲಿ (ಕಂಕಣ)ಯೋಗ, ನಂತರ ಬರೀ ಕತೆ.

ನರಸಿಂಹ ಪೈ, ಕಾಸರಕೋಡ
ರೈತರು ಮತ್ತು ಶಿಕ್ಷಕರು ದೇಶದ ಎರಡು ಕಣ್ಣುಗಳಂತೆ. ಏಕೆ?
'ಬೆಳೆ'ಗೆ ಕಾರಣರಾದ್ದರಿಂದ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಮಳೆ ನೀರಿಗೂ, ಎಳನೀರಿಗೂ ವ್ಯತ್ಯಾಸವೇನು?
ಮಳೆನೀರು ಕೊಚ್ಚಿಕೊಂಡು ಹೋಗುತ್ತದೆ; ಎಳನೀರು ಕೊಚ್ಚಿ ಕೊಂಡು ಹೋಗುತ್ತಾರೆ.

ರಾಜೀವ್ ಮಾಗಲ್, ಸಕಲೇಶಪುರ
ಸ್ನೇಹಿತರೊಬ್ಬರಿಗೆ ಗ್ರಹಣ ಮತ್ತು ಗ್ರಹಿಣಿ ಪದಗಳ ನಡುವೆ ಗೊಂದಲ ಉಂಟಾಗಿದೆ. ಪರಿಹಾರ ಒದಗಿಸಿ ಪ್ಲೀಸ್?
ಮಾವ ಮತ್ತು ಅತ್ತೆಯ ಗುರುತು ಸಿಗದೆ ಗೊಂದಲವಾಗಿರುವುದು ವಿಚಿತ್ರವೇ ಸೈ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಪಕ್ಷದಲ್ಲಿದ್ದುಕೊಂಡೇ ಪಕ್ಷವನ್ನೂ, ನಾಯಕರನ್ನೂ ದ್ವೇಷಿಸುವ ರಾಜಕಾರಣಿಯನ್ನು ಏನೆನ್ನಬೇಕು?
ಗೆದ್ದಲು ಹುಳ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಇತ್ತೀಚೆಗೆ ಸೀನುವವರು ಮತ್ತು ಕೆಮ್ಮುವವರು ಕಡಿಮೆಯಾಗಿದ್ದಾರೆ. ಏಕೆ?
ಸೀನಿದ/ಕೆಮ್ಮಿದವರನ್ನು ಹುಚ್ಚುನಾಯಿಯನ್ನು ಒಯ್ದಂತೆ ಕಾರ್ಪೊರೇಷನ್ ವ್ಯಾನ್ ಒಯ್ಯುವುದರಿಂದ.

## ಬಹುಮಾನಿತ ಪ್ರಶ್ನೆ

ದೀಪಕ್ ಘಾಟೆ, ಬೆಂಗಳೂರು
ಮನುಷ್ಯನಿಗೆ ಶಿರವೇ ಪ್ರಧಾನವಾಗಿದ್ದರೂ ಸಿನಿಮಾಗಳಲ್ಲಿ ಹೀರೋ ಎಂಟ್ರಿಯಾದಾಗ ಕಾಲನ್ನು ತೋರಿಸುವುದೇಕೆ?
ಅವನು ಯಾವಾಗಲೂ 'on call' ಎಂದು ತೋರಿಸಲಿಕ್ಕೆ.

ಅನಸೂಯ ಟಿ. ಕೇದಿಗೆಮನೆ
ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಇದು ನಿಜವೆ?
ನಿಜ. ನಮ್ಮ ನೆರೆಮನೆಯ ವೇದ ಬಹಳ ಸುಳ್ಳು ಹೇಳುತ್ತಾಳೆ.

ಬಿ.ಆರ್. ಉಷಾ, ಶ್ರೀವಿದ್ಯಾನಗರ
ಉತ್ತರ ಮತ್ತು ಉತ್ತರೆಗೆ ವ್ಯತ್ಯಾಸವೇನು?
ಉತ್ತರ ಭುವಿಯ ದಿಕ್ಕು; ಉತ್ತರೆ (ಉಳಿಮೆ ಮಾಡಿದರೆ) ಬದುಕಿಗೆ ದಿಕ್ಕು.

ಪದ್ಮನಾಭ, ಮೈಸೂರು
ಸ್ತ್ರೀಯರು ಎಂತೆಂಥ ಮಹಾ ಅಸ್ತ್ರಗಳಿದ್ದರೂ ಲಟ್ಟಣಿಗೆಯನ್ನೇ ಆಯುಧವಾಗಿ ಬಳಸಲು ಕಾರಣ?



ಪಾನಿಪೂರಿಯ ಅಳತೆಯಿಂದ ಚಪಾತಿಯ ಅಳತೆಯವರೆಗೆ ಚಪ್ಪಟೆಯಾಗಿಸಲು ಅದೇ ಬೆಸ್ಟ್.

ಬಿಂದುಶ್ರೀ ಕೆ.ಎಸ್. ಗೌರಿಬಿದನೂರು
ಕರೋನ ಭೀತಿಯಲ್ಲಿ ಕಷಾಯಕ್ಕೆ ಮೊರೆಹೋಗಿರುವ ಕೆಲವರು ಕಷಾಯದಲ್ಲೂ ರುಚಿ ಕೇಳ್ತಾರಲ್ಲಾ?
ಸರಿಯೇ. ನಾಲಿಗೆಯ ರಾಜ್ಯವನ್ನು ಪ್ರವೇಶಿಸಲು ರುಚಿಯೇ ವೀಸಾ.

ಮ.ಕೃ.ನ. ಮೂರ್ತಿ, ಬೆಂಗಳೂರು
ಸತ್ಯದ ಬದುಕಿಗೂ, ಸುಳ್ಳಿನ ಬದುಕಿಗೂ ಇರುವ ವ್ಯತ್ಯಾಸ?
ಸತ್ಯದ ಬದುಕು ಇರುವುದು ಸುಳ್ಳು; ಸುಳ್ಳಿನ ಬದುಕು ಇರುವುದು ಸತ್ಯ.

ಪ್ರಶ್ನೆಗಳನ್ನು ಕಳುಹಿಸಿ
editorsu@sudha.co.in

■ ರಾಮ್